**ದಿನಾಂಕ: 02.07.2022 ರಂದು ಬೆಳಿಗ್ಗೆ 10.30 ಕ್ಕೆ ಶ್ರೀಮತಿ ಅನುಷಾ .ಎ.ಎಂ., ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್–177 (ಜೆ.ಪಿ.ನಗರ) ನಡೆದ ಸಭೆಯ ನಡಾವಳಿಗಳು:**

## : ಚರ್ಚೆಯಾದ ವಿಷಯಗಳು :

1. ವಾರ್ಡ್–177ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ ಅಭಿವೃದ್ಧಿ ಕಾಮಗಾರಿಗಳು ಹಾಗೂ ಘನತ್ಯಾಜ್ಯ ನಿರ್ವಹಣೆ ಮತ್ತು ಕೊವಿಡ್–19ರ ಬಗ್ಗೆ ಚರ್ಚಿಸುವ ಕುರಿತು.
2. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

## : ಸಭೆಗೆ ಹಾಜರಾಗಿದ್ದವರ ವಿವರಗಳು :

| | |
|---|---|
| ಅಧ್ಯಕ್ಷರು | ನೋಡಲ್ ಅಧಿಕಾರಿ |
| ಸದಸ್ಯ ಕಾರ್ಯದರ್ಶಿ | ವಾರ್ಡ್ 177ರ ಸಹಾಯಕ ಅಭಿಯಂತರರು |
| ಸದಸ್ಯರುಗಳು | ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು |
| ಸದಸ್ಯರುಗಳು | ಜೆ.ಪಿ.ನಗರ ಸಹಾಯಕ ಕಂದಾಯ ಅಧಿಕಾರಿಗಳು |
| ಸದಸ್ಯರುಗಳು | ತೋಟಗಾರಿಕೆ ಅಧಿಕಾರಿ (Horti. Inspector) |
| ಸದಸ್ಯರುಗಳು | ಠಾಣಾಧಿಕಾರಿಗಳು, ನ್ಯಾಯ ಮತ್ತು ಸುವ್ಯವಸ್ಥೆ ಹಾಗೂ ಸಂಚಾರಿ |
| ಸದಸ್ಯರುಗಳು | ಕಂದಾಯ ಪರಿವೀಕ್ಷಕರು, ವಾರ್ಡ್ 177 |
| ಸದಸ್ಯರುಗಳು | ಅರಣ್ಯ ಸಂರಕ್ಷಣಾಧಿಕಾರಿಗಳು |
| ಸದಸ್ಯರುಗಳು | ಟ್ರಾಫಿಕ್ ಇಲಾಖೆಯ ಅಧಿಕಾರಿಗಳು |
| ಸದಸ್ಯರುಗಳು | ಮೇಜರ್ ರೋಡ್ ಇಲಾಖೆ ಅಧಿಕಾರಿಗಳು |
| ಸದಸ್ಯರುಗಳು | ಬಿಡಬ್ಲ್ಯೂಎಸ್ಎಸ್‌ಬಿ ಅಧಿಕಾರಿಗಳು |

## :ನಡಾವಳಿಯ ವರದಿ:

➢ ಅಧ್ಯಕ್ಷರು ಮಾತನಾಡುತ್ತಾ ಹಿಂದಿನ ಸಭೆಯಲ್ಲಿ ಚರ್ಚೆಯಾದ ವಿಷಯಗಳ ಬಗ್ಗೆ ಅಧಿಕಾರಿಗಳು ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

**ಸದರಿ ಸಭೆಯಲ್ಲಿ ಕಸ ವಿಲೇವಾರಿ ಸಮಸ್ಯೆ ಹಾಗೂ ಇತರೇ ದೂರುಗಳ ಬಗ್ಗೆ ಕುರಿತು ಈ ಕೆಳಕಂಡಂತೆ ಪ್ರಸ್ತಾಪಿಸಲಾಯಿತು.**

➢ ವಾರ್ಡ್ ವ್ಯಾಪ್ತಿಯ ಖಾಲಿ ನಿವೇಶನದ ಮಾಲೀಕರುಗಳ ಹೆಸರು, ದೂರವಾಣಿ ಸಂಖ್ಯೆಯನ್ನು ಕೋರಿದ್ದು, ಸದರಿ ಮಾಹಿತಿಯು ಕ್ರೂಢೀಕೃತವಾಗುತ್ತಿರುತ್ತದೆ. ಕೂಡಲೇ ಮಾಹಿತಿಯನ್ನು ನೀಡಲಾಗುವುದೆಂದು ಸಭೆಯಲ್ಲಿ ಕಂ.ಪ. ತಿಳಿಸಿರುತ್ತಾರೆ.

**ಕ್ರಮ : ಸಹಕಂದಾಯ ಅಧಿಕಾರಿ, ಜೆ.ಪಿ.ನಗರ ಉಪವಲಯ**

➢ ವಾರ್ಡ್ ವ್ಯಾಪ್ತಿಯ ಹಲವು ಕಡೆಗಳಲ್ಲಿ ಮರದ ರೆಂಬೆ–ಕೊಂಬೆಗಳು ತೆರವುಗೊಳಿಸುವಂತೆ ಹಾಜರಿದ್ದ ಅರಣ್ಯ ಸಹಾಯಕರವರು ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಲಾಯಿತು.

**ಕ್ರಮ : ಅರಣ್ಯ ಇಲಾಖೆ (ದಕ್ಷಿಣ)ವಿಭಾಗ**

➢ ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಬೀದಿ ದೀಪಗಳು ಹಾಳಾಗಿರುವುದನ್ನು ಸರಿಪಡಿಸುವಂತೆ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರವರಿಗೆ ವಾರ್ಡ್ ಸಭೆಯಲ್ಲಿ ತಿಳಿಸಲಾಯಿತು.

**ಕ್ರಮ:– ಸ.ಕಾ.ನಿ.ಅ., ಬೀದಿ ದೀಪ ನಿರ್ವಹಣೆ ವಿಭಾಗ**

- 11ನೇ ಅಡ್ಡರಸ್ತೆಯಿಂದ 15ನೇ ಅಡ್ಡರಸ್ತೆವರೆಗೆ 9ನೇ ಮುಖ್ಯರಸ್ತೆಯ ಪಾರ್ಶ್ವದಲ್ಲಿ ಬೃಹತ್ ನೀರು ಗಾಲುವೆ ಹಾದುಹೋಗಿದ್ದು, ಸದರಿ ಕಾಲುವೆಯ ಪಕ್ಕದಲ್ಲಿ ಒತ್ತುವರಿಯಾಗಿರುವ ಬಗ್ಗೆ ಚರ್ಚಿಸಲಾಯಿತು. ಅಲ್ಲದೇ ತಮ್ಮ ಉಪವಿಭಾಗದ ಸಹಾಯಕ ಇಂಜಿನಿಯರ್ ರವರು ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗಿದ್ದು, ಮುಂದಿನ ಸಭೆಯಲ್ಲಿ ಮೇಲ್ಕಂಡ ವಿವರಗಳೊಂದಿಗೆ ಹಾಜರಾಗಲು ಸೂಚಿಸಿದೆ.

**ಕ್ರಮ :- ಸ.ಕಾ.ನಿ.ಅ. ಎಸ್.ಡಬ್ಲ್ಯೂ.ಡಿ.**

- ಆರೋಗ್ಯ ಇಲಾಖೆಯಲ್ಲಿ ನಿರ್ವಹಿಸುತ್ತಿರುವ ಯೋಜನೆಗಳು ಹಾಗೂ ನಿರ್ವಹಣೆಗೆ ಒದಗಿಸಿರುವ ಅನುದಾನದ ವಿವರಗಳನ್ನು ಮುಂದಿನ ಸಭೆಯಲ್ಲಿ ನೀಡಲು ಕೋರಲಾಗಿದೆ. ಅಲ್ಲದೇ ವಾರ್ಡ್ ಸಮಿತಿ ಸಭೆಯಲ್ಲಿ ಇಲಾಖೆಯ ಮುಖ್ಯಸ್ಥರು ಮೇಲ್ಕಂಡ ವಿವರಗಳೊಂದಿಗೆ ಹಾಜರಾಗಲು ಕೋರಲಾಗಿದೆ.

**ಕ್ರಮ:- ಆರೋಗ್ಯ ಇಲಾಖೆ, ಜಯನಗರ ವಿಭಾಗ**

- ವಾರ್ಡ್ ವ್ಯಾಪ್ತಿಯಲ್ಲಿ ಬರುವ ಮೇಜರ್ ರಸ್ತೆಗಳ ಅಭಿವೃದ್ಧಿಗಾಗಿ ಅನುದಾನ ಪ್ರಸ್ತಾವನೆ ಕೋರಿ ಸಲ್ಲಿಸಿರುವ ಪತ್ರಗಳು ಹಾಗೂ ಇತರೆ ಯೋಜನೆಗಳಿಗೆ ತಮ್ಮ ವತಿಯಿಂದ ಹಸ್ತಾಂತರಿಸಿರುವ ರಸ್ತೆ ವಿವರಗಳನ್ನು ಮುಂದಿನ ಸಭೆಯಲ್ಲಿ ಇಲಾಖೆಯ ಮುಖ್ಯಸ್ಥರು ಮೇಲ್ಕಂಡ ವಿವರಗಳೊಂದಿಗೆ ಹಾಜರಾಗಲು ಕೋರಲಾಗಿದೆ.

**ಕ್ರಮ:-ಸ.ಕಾ.ನಿ.ಅ., ಮೇಜರ್ ರೋಡ್**

- ವಾರ್ಡ್ ವ್ಯಾಪ್ತಿಯ ರಸ್ತೆ ಮತ್ತು ಪಾದಚಾರಿ ಮಾರ್ಗ ಹಾಗೂ ಬೃಹತ್ ನೀರುಗಾಲುವೆ ಅಕ್ಕ-ಪಕ್ಕದಲ್ಲಿ ಡೆಬ್ರೀಸ್ ಹಾಕಲಾಗಿದ್ದು, ಸದರಿ ಡೆಬ್ರೀಸ್‌ಅನ್ನು ತೆರವುಗೊಳಿಸುವಂತೆ ಹಾಗೂ ಹಲವು ರಸ್ತೆಗಳಲ್ಲಿ ಓವರ್ ಹ್ಯಾಂಗಿಂಗ್ ಕೇಬಲ್‌ಗಳು ನೇತಾಡುತ್ತಿದ್ದು, ಅದನ್ನು ತೆರವುಗೊಳಿಸುವಂತೆ ಚರ್ಚಿಸಲಾಯಿತು.

**ಕ್ರಮ:-ಸ.ಕಾ.ನಿ.ಅ., ಜೆ.ಪಿ.ನಗರ ಉಪವಿಭಾಗ**

- ವಾರ್ಡ್ 177ರ ವ್ಯಾಪ್ತಿಯ 21ನೇ ಮತ್ತು 23ನೇ ಮುಖ್ಯರಸ್ತೆಯಲ್ಲಿರುವ ಇನ್‌ಶ್ರೀ ಸ್ಕೂಲ್‌ನ ವಾಹನಗಳ ರಸ್ತೆಬದಿಯ ಎರಡು ಕಡೆಗಳಲ್ಲಿ ವಾಹನಗಳು ನಿಲ್ಲಿಸುತ್ತಿದ್ದು, ಇದರಿಂದಾಗಿ ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವ ಬಗ್ಗೆ ಹಾಗೂ 17ನೇ ಮುಖ್ಯರಸ್ತೆ, 1ನೇ ಎ ಅಡ್ಡರಸ್ತೆಯ ಸಮರ್ಥನಂ ಟ್ರಸ್ಟ್‌ನ ಹತ್ತಿರ ಸುಮಾರು 4 ತಿಂಗಳಿಂದ ಒಂದು ಬಿಡಾಡಿ ವಾಹನ ನಿಲ್ಲಿಸುತ್ತಿದ್ದು, ಅದನ್ನು ತೆರವುಗೊಳಿಸುವ ಕುರಿತು, ಜೆ.ಪಿ.ನಗರ ವ್ಯಾಪ್ತಿಯ ಎಲ್ಲಾ ರಸ್ತೆಗಳಲ್ಲಿ ಪಾರ್ಕಿಂಗ್ ಮತ್ತು ಅನ್-ಪಾರ್ಕಿಂಗ್ ಬೋರ್ಡ್‌ಗಳನ್ನು ಅಳವಡಿಸುವಂತೆ ಜೆ.ಪಿ.ನಗರ ನಿವಾಸಿಗಳು ಕೋರಿರುವ ಬಗ್ಗೆ ಹಾಗೂ 8ನೇ ಅಡ್ಡರಸ್ತೆಯಿಂದ 7ನೇ ಅಡ್ಡರಸ್ತೆಯ ಮಧ್ಯೆ ಬರುವ 23ನೇ ಎ ಮುಖ್ಯರಸ್ತೆಯನ್ನು ವಾಹನ ಸಂಚಾರಕ್ಕೆ ಅಡ್ಡಿ ಮಾಡಿ ಬ್ಯಾರಿಕೇಡ್‌ಅನ್ನು ಹಾಕಲಾಗಿದ್ದು, ಸದರಿ ಬ್ಯಾರಿಕೇಡ್‌ಅನ್ನು ತೆರವುಗೊಳಿಸುವಂತೆ ಚರ್ಚಿಸಲಾಯಿತು. ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.

**ಕ್ರಮ:- ಜಯನಗರ ಸಂಚಾರಿ ಪೊಲೀಸ್ ಠಾಣೆ**

- ವಾರ್ಡ್ 177ರ ವ್ಯಾಪ್ತಿಯ ಹಲವು ಕಡೆ ಕಳ್ಳತನ, ತಂಬಾಕು ಸೇವನೆ ಹೆಚ್ಚಾಗುತ್ತಿದ್ದು ಇದನ್ನು ತಡೆಗಟ್ಟುವ ಬಗ್ಗೆ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ನಿರ್ಭಯ್ ಯೋಜನೆ ಬಗ್ಗೆ, ಸಿಸಿ ಕ್ಯಾಮರಾಗಳನ್ನು ಅಳವಡಿಸಿರುವ ಬಗ್ಗೆ, ರಾತ್ರಿ ವೇಳೆಯಲ್ಲಿ ಪೊಲೀಸ್ ಬೀಟ್‌ನ್ನು ನಿರ್ವಹಿಸುತ್ತಿಲ್ಲವೆಂದು ಸಾರ್ವಜನಿಕರು ದೂರಿರುತ್ತಾರೆ. ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಗಿದೆ ಹಾಗೂ ಸದರಿ ಮಾಹಿತಿಯ ಕುರಿತು ಕೈಗೊಂಡಿರುವ ವಿವರಗಳನ್ನು ಮುಂದಿನ ಸಭೆಯಲ್ಲಿ ನೀಡಲು ನಿರ್ಧರಿಸಲಾಯಿತು.

**ಕ್ರಮ:- ಆರಕ್ಷಕರ ವೃತ್ತ ನಿರೀಕ್ಷಕರು, ಜೆ.ಪಿ.ನಗರ ಪೊಲೀಸ್ ಠಾಣೆ**

- ವಾರ್ಡ್ 177ರ ವ್ಯಾಪ್ತಿಯ ಹಲವು ಕಡೆಗಳಲ್ಲಿ ಮ್ಯಾನ್‌ಹೋಲ್‌ಗಳಿಂದ ನೀರು ಹೊರಹೊಮ್ಮುತ್ತಿದ್ದು, ಇದರಿಂದಾಗಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದಾಗಿ ಹಾಗೂ ಸ್ಥಳೀಯ ನಿವಾಸಿಗಳ ಮನೆಗಳಿಂದ ಒಳಚರಂಡಿ ಕೊಳವೆಗಳನ್ನು ಬೃಹತ್ ನೀರು ಗಾಲುವೆಗೆ ಸಂಪರ್ಕಗೊಳಿಸಿರುವುದರಿಂದ, ಬೃಹತ್ ನೀರು ಗಾಲುವೆಯ ಅಕ್ಕ-ಪಕ್ಕದ ಸಾರ್ವನಿಕರಿಗೆ ಹಾಗೂ ನಿವಾಸಿಗಳಿಗೆ ವಾಸನೆಯಿಂದಾಗಿ ರೋಗ-ರುಜಿನಗಳು ಬರುವುದಾಗಿ ಚರ್ಚಿಸಲಾಯಿತು. ಇದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಕೋರಲಾಗಿದೆ.

**ಕ್ರಮ:- ಸ.ಕಾ.ನಿ.ಅ., ಬಿಡಬ್ಲ್ಯೂಎಸ್‌ಎಸ್‌ಬಿ**

- ದಿನಾಂಕ 02-07-2022 ರಂದು ಶ್ರೀ ಆರ್. ರಾಜಗೋಪಾಲನ್ ರವರು ಹಲವು ಇಲಾಖೆಯಲ್ಲಿ ಬಾಕಿ ಇರುವ ದೂರುಗಳು ಹಾಗೂ ಇಲಾಖೆ ನಿರ್ವಹಿಸುತ್ತಿರುವ ಕಾಮಗಾರಿ ಮತ್ತು ಇತರೆ ಸಾರ್ವಜನಿಕರ ತೊಂದರೆಗಳಿಗೆ ಸಂಬಂಧಿಸಿದಂತೆ ಲಿಖಿತ ರೂಪದಲ್ಲಿ ಮನವಿಯನ್ನು ನೀಡಿದ್ದು, ಅದನ್ನು ಸಂಬಂಧಪಟ್ಟ ಇಲಾಖೆರವರಿಗೆ ನೀಡಲಾಗಿದ್ದು, ಇತರೆ ಸಂಬಂಧ ಮುಂದಿನ ಸಭೆಯಲ್ಲಿ ಎಲ್ಲಾ ಇಲಾಖೆಯವರು ವಿವರಗಳೊಂದಿಗೆ ಹಾಜರಾಗಲು ಕೋರಲಾಗಿದೆ.

- ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಸಾರ್ವಜನಿಕರಿಗೆ ವಂದನೆಯನ್ನು ತಿಳಿಸುತ್ತಾ, ಇನ್ನು ಮುಂದೆ ಪ್ರತಿ ತಿಂಗಳು ಮೊದಲ ಶನಿವಾರ ಹಾಗೂ ಮೂರನೇ ಶನಿವಾರ ಬೆಳಿಗ್ಗೆ 10.30 ಘಂಟೆಗೆ ಇದೇ ರೀತಿಯಾಗಿ ಮಾಸಿಕ 2 ಬಾರಿ ವಾರ್ಡ್ ಸಮಿತಿ ಸಭೆ ನಡೆಯುವುದಾಗಿ ತಿಳಿಸಿ ಮುಂದಿನ ಸಭೆಗಳಿಗೆ ಈ ವಾರ್ಡಿನ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸದರಿ ಸಭೆಗೆ ಮಾಹಿತಿಗಳೊಂದಿಗೆ ಸಕಾಲದಲ್ಲಿ ಹಾಜರಾಗುವಂತೆ ಹಾಗೂ ಈ ಸಭೆಯಲ್ಲಿ ತಿಳಿಸಿರುವ ಸಮಸ್ಯೆಗಳನ್ನು ಬಗೆಹರಿಸಲು ಕೋರಿ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು.
- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರವರು ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸದಸ್ಯ ಕಾರ್ಯದರ್ಶಿ**
**ಹಾಗೂ ಸಹಾಯಕ ಅಭಿಯಂತರರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**